ಹೀಗಾಗಿ ಅವನು ಭಾರತಕ್ಕೆ ಮತ್ತೆ ಯಾತ್ರೆ ಕೈಗೊಳ್ಳಬೇಕೆಂದು ನಿರ್ಧರಿಸಿದ. ಈ ವಿಷಯವಾಗಿ ಮಾತನಾಡಲು ಅವನು ಅನಿರುದ್ಧನಿಗೆ ಮಾರನೆಯ ದಿನ ಫೋನ್ ಮಾಡಿದ.

"ಯಸ್, ನಿನ್ನ ಜೊತೆ ಮಾತನಾಡಿದ ನಂತರ ಸುಜಾತಾ ನನ್ನ ಜೊತೆಗೂ ಮಾತಾಡಿದ್ದಳು. ನನಗೆ ಇದರಲ್ಲಿ ಯಾವ ಅರ್ಥವೂ ಕಾಣಿಸುತ್ತಿಲ್ಲ. ಆದರೂ ಫರ್ ಹರ್ ಸೇಕ್ ನಾನು ಮುಂಬೈಗೆ ಹೋಗುತ್ತೇನೆ. ನೀನು ಬರುವ ಅವಶ್ಯಕತೆ ನನಗೆ ಕಾಣಿಸುತ್ತಿಲ್ಲ" ಅನಿರುದ್ಧ ಹೇಳಿದ.

"ಬಟ್ ಷಿ ವಾಂಟ್ಸ್ ಬೋತ್ ಅಪ್ ಅಸ್... ಈ ಸಮಯದಲ್ಲೂ ನಾವು ಅವಳಿಗಾಗದಿದ್ದರೆ ಗೆಳೆಯರಾಗಿ ಏನು ಪ್ರಯೋಜನ?"

"ಅದೂ ನಿಜವೇ... ಆದರೆ ಹೀಗೆ ಮಾಡೋಣ. ಮೊದಲಿಗೆ ನೀನು ಹೋಗು. ಆಮೇಲೆ ನಾನು ಹೋಗುತ್ತೇನೆ.. ಲೆಟ್ಸ್ ಟೇಕ್ ಟರ್ನ್ಸ್. ಅವಳ ಜೊತೆಗೆ ಒಬ್ಬರಾದರೂ ಇದ್ದಹಾಗಾಗುತ್ತದೆ. ಆರ್ ನಾನು ಇಲ್ಲಿಂದ ಮ್ಯಾನೇಜ್ ಮಾಡುತ್ತೇನೆ. ನಿನಗೆ ಸ್ಕೈಪಿನ ಮೂಲಕ ವಿಷಯ ತಿಳಿಸಬಹುದು ಅಲ್ಲವಾ"

"ಬಟ್ ಷಿ ವಾಂಟ್ಸ್ ಬೋತ್ ಅಪ್ ಅಸ್... ಈ ಸಮಯದಲ್ಲೂ ನಾವು ಅವಳಿಗಾಗದಿದ್ದರೆ ಗೆಳೆಯರಾಗಿ ಏನು ಪ್ರಯೋಜನ?" ಮತ್ತದೇ ಮಾತನ್ನ ಅಖ್ತರ್ ಹೇಳಿದ.

"ಹಾಗಲ್ಲ. ನೀನು ಬರೋದರಿಂದ ನಿನಗೂ ಕಷ್ಟ. ಮತ್ತೆ ವಿಚಾರಣೆಯಾದರೆ ನಿನ್ನ ಡಿಸ್ಟ್ರಾಕ್ಷನ್ನೇ ಹೆಚ್ಚಾಗುತ್ತದೆ. ನಾನೇ ಇಲ್ಲಿಂದ ನಿಭಾಯಿಸುತ್ತೇನೆ" ಅನಿರುದ್ಧ ಹೇಳಿದ. "ಅಥವಾ ನೀನು ಬಾ, ನಾನು ಬೆಂಗಳೂರಿನಲ್ಲಿಯೇ ಉಳಿಯುತ್ತೇನೆ..."

ಕಡೆಯ ವಾಕ್ಯದವರೆಗೂ ಅಖ್ತರನಿಗೆ ಅನಿರುದ್ಧನ ಇರಾದೆಯ ಬಗ್ಗೆ ಅನುಮಾನವಿರಲಿಲ್ಲ. ಆದರೆ ತಾನು ಅಲ್ಲಿಗೆ ಹೋದರೆ ಅವನು ಬರುವುದಿಲ್ಲವೆಂದ ತರ್ಕ ಅವನಿಗರ್ಥವಾಗಲಿಲ್ಲ... ಅಥವಾ ಅರ್ಥವಾಯಿತು.

ಅಖ್ತರ ಯೋಚಿಸಿದ. ಇದು ಸ್ನೇಹದ ವಿಷಯವಲ್ಲ. ಇಲ್ಲಿ ಮೂಲಭೂತವಾಗಿ ಯಾವುದೋ ಕೊಂಡಿ ಕಳಚಿತ್ತು. ಅವರ ದಾರಿಗಳು ಭಿನ್ನವಾಗಿದ್ದವು. ಅವನು ಏನು ಮಾಡುವುದೋ ತೋರದೇ ಕುಳಿತಿದ್ದಾಗ ಅವನಿಗೆ ತನ್ನ ಫೋನಿನ ಮೇಲೆ ಕರೆ ಬಂತು.

"ದಿಸ್ ಇಸ್ ಶಿವಾನಿ ಫ್ರಮ್ ಅನ್.ಆಕ್ಸೆಸರೀಸ್. ನಿಮಗೆ ಒಂದು ಮೇಲ್ ಕಳಿಸಿದ್ದೆ. ಇಸ್ ದಿಸ್ ಎ ಗುಡ್ ಟೈಂ ಟು ಟಾಕ್?"

"ಯಸ್ ಅಫ್ಕೋರ್ಸ್. ಬೆಟರ್ ಸ್ಟಿಲ್ ನಾನೇ ನಿಮಗೆ ಕರೆ ಮಾಡುತ್ತೇನೆ. ಭಾರತಕ್ಕೆ ಮುಂದಿನ ವಾರ ಬರುತ್ತಿದ್ದೇನೆ. ಆಗ ನಾವು ಮುಖತಃ ಭೇಟಿಯಾಗಿ ಮಾತಾಡಬಹುದಲ್ಲವೇ... ನಾಟ್ ಒನ್ಲಿ ಎಬೌಟ್ ಅನ್. ಆಕ್ಸೆಸರೀಸ್, ಬಟ್ ಸೆವರಲ್ ಅದರ್ ಥಿಂಗ್ಸ್" ಎಂದು ಅಖ್ತರ ಹೇಳಿದ. ಕಂಪ್ಯೂಟರಿನ ಕೀಲಿ ಒತ್ತಿ ಮುಂಬಯಿಗೊಂದು ಟಿಕೆಟ್ಟನ್ನು ಖರೀದಿಸಿದ.

## ಎಂ.ಎಸ್. ಶ್ರೀರಾಮ

ಕತೆಗಾರ, ಪ್ರಬಂಧಕಾರ, ಅರ್ಥತಜ್ಞ ಶ್ರೀರಾಮ್ ಬೆಂಗಳೂರಿನವರು. 'ಶನಿವಾರ ಸಂತೆ', 'ಕನಸು ಕಟ್ಟುವ ಕಾಲ', 'ತೇಲ್ ಮಾಲಿಶ್', 'ಅವರವರ ಸತ್ಯ', 'ಮಾಯಾದರ್ಪಣ', 'ಸಲ್ಮಾನ್ ಖಾನ್‌ನ ಡಿಫಿಕಲ್ಟೀಸು' ಅವರ ಪ್ರಮುಖ ಪುಸ್ತಕಗಳು.